# ಸಂಕ್ಷಿಪ್ತ ದಿವಶೀಗೌರೀ ಕಥೆ

ಧಾಟಿ

''ನಾವು ಮೂರುಮಂದಿ ದಾರಿಕಾರರಿರುವೆವು'' ಎಂಬಂತೆ

ಅಥವಾ

''ಮೂರ್ತಿಮಂತ ಭೀತಿ ಉಭೆ'' ಎಂಬ ಪದದಂತೆ

ಶಶಿವದನೆಯರೇ ದಿವಶೀ ವ್ರತವ ಮಾಡಿರೇ।
ಶಶಿಶೇಕರನ ರಮಣಿಯ ಪೂಜಿಸಿ ವರವ ಬೇಡಿರೇ ॥ ಪಲ್ಲ ।

ಕತ್ಲ ರಾಯನ ಪತ್ನಿ ದಿವಸ ಪುತ್ರನ ಪಡೆದು।
ಇತ್ತ ವಸ್ತ್ರಗಳರ್ಥಿಲಿಂದಲಿ ಚದುರೆಗೆ ತಾವು ॥ 1 ॥

ಮೃತನಾದ ಸುತಗೆ ಸತಿ ಕೊಡುವೆ ಎಂದು ಜಪಿಸಲು।
ಸತತ ದ್ರವ್ಯ ಕೊಡುವೆಯೆಂದು ಮಾತನಾಡಿಸಿದವನ ॥ 2 ॥

ಬಂಗಾರ ಬೆಳ್ಳಿ ದ್ರವ್ಯ ಸಹ ನಮಗೆ ಬರುವುದು।
ಹಾಗೆಂದು ಮಾಂಗಲ್ಯ ಬಂಧನ ಮಾಡಿ ಪೋದರು ॥ 3 ॥

ಪತಿಯ ಬಿಟ್ಟು ಪೋದರೆ ಪತಿವ್ರತವು ಬಾರದು।
ಹಿತವ ಬಯಸಿ ಪೋದಮೇಲೆ ಸದ್ಗತಿಯು ಬರುವ ॥ 4 ॥

ನಾರು ಬಟ್ಟೆಯ ನೀರು ಎಣ್ಣೆಯ' ಗೌರೀಗೆ ಮಾಡಿದಳು।
ಅಪಾರಶಾಲಿ ತಾನು ಗೌರಿಯ ಪೂಜೆ ಮಾಡಿದಳು ॥ 5 ॥

ಒಂದು ದಿವಸ ಸುಂದರಿ ಬಂದು ಕೇಳಿದಳು।
ಮಂದಿ ಬಳಗ ಇಲ್ಲದೆ ಪೂಜೆಯ ಮಾಡಿದಳು ॥ 6 ॥

https://madhwafestivals.wordpress.com

ಹರನು ತಾ ಭಂಡಾರ ಒಡೆದು ಹರುಷ ಗೆಲಿದನು ।
ವರ ಕಾಳಿಂಗ ನಾಕ್ಷಣದಲೆದ್ದು  ಕುಳಿತನು ॥ 7 ॥

ಪೊಡವಿಯೊಳಗಿನ ಮಡದಿಯರಿಗೆಲ್ಲಿದು ಸುವರವ್ರತವು।
ಬಿಡದೆ ಮಾಳ್ಪರಿಗೆ ಕಡುಮುತ್ತೈದೆತನ ಕಡೆವರೆಗೆ ॥ 7 ॥

ಆಷಾಢಮಾಸ್ಯ ಅಮಾವಸ್ಯೆ ದಿನದಲಿ।
ಸೂಸಿಲಿಂದ ಮಾಳ್ಪರಿಗೆ ಶ್ರೀ ವೆಂಕಟೇಶ ಒಲಿವ ॥ 9 ॥

https://madhwafestivals.wordpress.com